# ರಾಯಲ್ ಲುಕ್‌ಗೆ ಕುರ್ತಾ

**ಪುರುಷರ ಫ್ಯಾಷನ್ ಲೋಕದಲ್ಲಿ ತನ್ನದೇ ಟ್ರೆಂಡ್ ಎಂದು ಕುರ್ತಾ ಬಿಗುಮಾನದಿಂದ ಕೂಗುತ್ತಿದೆ. ಕಾಲಕ್ಕೆ ತಕ್ಕಂತೆ ವಿಭಿನ್ನ ವಿನ್ಯಾಸ, ಮೆರುಗಿನಿಂದ ಅನುಗಾಲವೂ ತನ್ನ ಹೊಸತನವನ್ನು ಕಾಪಿಟ್ಟುಕೊಂಡಿರುವ ಆದರ ವಿನೂತನ ಅವತಾರವನ್ನು ಹೇಳುತ್ತಿದೆ ಆ ಸೊಲ್ಲು.**

■ ರಾಘು



ಫ್ಯಾಷನ್ ಉಡುಪಿನೊಂದಿಗೆ ಮಿಂಚುವ ಉತ್ಸಾಹಿಗಳಲ್ಲಿ ಪುರುಷರೇನೂ ಕಡಿಮೆಯಿಲ್ಲ. ರಾಯಲ್ ಲುಕ್ ನೀಡುವ ಫ್ಯಾಷನಬಲ್ ಕುರ್ತಾ ಪುರುಷರ ಮೆಚ್ಚಿನ ಆಯ್ಕೆಯೂ ಹೌದು.

ಕುರ್ತಾ, ಜಾಕೆಟ್, ಮದುವೆ, ಹಬ್ಬ ಮತ್ತು ಇತರ ವಿಶೇಷ ಕಾರ್ಯಕ್ರಮಗಳಿಗೆ ಅತ್ಯುತ್ತಮ ಆಯ್ಕೆಯಾಗಿದೆ. ಸೊಗಸಾಗಿ ಕಾಣಲು, ರಾಯಲ್ ಲುಕ್ ನೀಡಲು ಕುರ್ತಾ ಸಹಕಾರಿ. ಇದು ಸಾಂಪ್ರದಾಯಿಕ ಮೋಡಿ ಮತ್ತು ಉತ್ಕೃಷ್ಟತೆಯ ಸ್ಪರ್ಶ ನೀಡುತ್ತದೆ. ಆಧುನಿಕತೆಯೊಂದಿಗೆ ಬೆಸೆದಿರುವ ಕುರ್ತಾಗಳು ಫ್ಯಾಷನಬಲ್ ಆಗಿಯೂ ಸೆಳೆಯುವಂತಿವೆ.

ಕುರ್ತಾ ಮತ್ತು ಶೆರ್ವಾನಿ ಮೇಲೆ ಕಾಂಟ್ರಾಸ್ಟ್ ಜಾಕೆಟ್ ಅಥವಾ ಕೋಟ್ ತೊಡುವುದು ಕೂಡ ಸಾಂಪ್ರದಾಯಿಕ–ಆಧುನಿಕ ಸಮ್ಮಿಲನದಂತಿರುತ್ತದೆ. ಅಲ್ಲದೆ ಕುರ್ತಾದ ಮೇಲೆ ಸಿಲೌಟ್ ಜಾಕೆಟ್ ಸಮಕಾಲೀನ ವಿನ್ಯಾಸವನ್ನು ಪ್ರತಿನಿಧಿಸುವಂತಿರುತ್ತದೆ. ಹೀಗಾಗಿ ಯುವಕರು ಇದನ್ನೇ ಇಷ್ಟಪಡುತ್ತಿದ್ದಾರೆ.

ಸಾಂಪ್ರದಾಯಿಕ ಅಂದ ಕೂಡಲೇ ಥಟ್ಟನೆ ಕಣ್ಣಮುಂದೆ ಸಂಭ್ರಮದ ಮಿಂಚು ಹೊಳೆಯುತ್ತದೆ. ಅದು ಹಬ್ಬ ಹರಿದಿನ, ಸಭೆ ಸಮಾರಂಭ ಅಂದರೆ ಕೇಳಬೇಕೆ? ಆಗ ಮಿಂಚಲೇಬೇಕು ಎನ್ನುವ ಕನಸಿಗೆ ರೆಕ್ಕೆ ಪುಕ್ಕ ಮೂಡೇ ಮೂಡುತ್ತದೆ. ಹೊಸತನ್ನೇ ಅರಸುವ ಮನಸ್ಸಿಗೆ ಹೊಸ ರೀತಿಯಲ್ಲಿ ಅಲಂಕರಿಸಿಕೊಳ್ಳುವ ತವಕ. ಅದನ್ನು ತಣಿಸಲು ಫ್ಯಾಷನ್ ಲೋಕವೂ ಸಜ್ಜಾಗಿಯೇ ನಿಂತಿರುತ್ತದೆ.

ಹವಾಮಾನ ಮತ್ತು ಪ್ರಾದೇಶಿಕ ಪದ್ಧತಿಗೆ ತಕ್ಕ ಹಾಗೆ ಸಾಂಪ್ರದಾಯಿಕ ಡ್ರೆಸ್‌ಗಳು ಅವತಾರ ತಾಳುತ್ತವೆ. ಅದರಲ್ಲಿ ಕುರ್ತಾ ಮುಂಚೂಣಿಯಲ್ಲಿ ನಿಲ್ಲುತ್ತದೆ. ಈಗ ಅದೇ, ಪರಂಪರೆಯ ಜೊತೆ ಬೆಸೆದುಕೊಂಡು ಹೊಸ ರೂಪವನ್ನು ಧರಿಸಿದೆ. ಕಸೂತಿ ಕಲೆ, ಬೆಲೆಬಾಳುವ ಕುರ್ತಾವನ್ನು ಶೃಂಗರಿಸಿ ನೋಡುವ ಕಣ್ಣುಗಳಿಗೆ ಹಬ್ಬದೂಟವನ್ನು ಉಣಬಡಿಸುತ್ತಿದೆ. ಈ ಕಲೆಯಲ್ಲಿಯೂ ಗ್ರಾಹಕರ ಅನುಕೂಲ ಮತ್ತು ಅಗತ್ಯಕ್ಕೆ ತಕ್ಕಂತೆ ರೂಪಿಸುವುದೇ ವಿಶೇಷ ಎನ್ನುತ್ತಾರೆ ಬೆಂಗಳೂರಿನ ಫ್ಯಾಷನ್ ಡಿಸೈನರ್ ಪಾಲ್ಗುಣಿ ಗೌಡ.

ಗಾಢಬಣ್ಣದ ರೇಷ್ಮೆ ಕುರ್ತಾಗಳಿಗೆ ಎಂಬ್ರಾಯ್ಡರಿ ಇದ್ದರೆ ಚೆನ್ನಾಗಿರುತ್ತದೆ. ಈ ಹಿಂದೆ ಕಾಲರ್ ಮತ್ತು ಎದೆಯ ಮೇಲೆ ತನ್ನ ಚಿತ್ತಾರವನ್ನು ಬಳ್ಳಿಯಂತೆ ಹೆಣೆದುಕೊಳ್ಳುತ್ತಿತ್ತು. ಕತ್ತನ್ನು ಬಳುಕಿ ತಬ್ಬುವ ಆ ಹೆಣಿಗೆ ಥಟ್ಟನೇ ಕಣ್ಣೋಟವನ್ನು ಸೆಳೆಯುತ್ತಿತ್ತು. ಅದೀಗ ಬೇರೆಯ ರೂಪವನ್ನು ಅವತರಿಸಿ ತೋಳಿನ ಮೇಲೆ ಅನಾವರಣವಾಗುತ್ತಿದೆ. ಹುಲಿ–ಸಿಂಹಗಳ ವಿರಾಜಮಾನ ನೋಟ ಅಲ್ಲಿ ಇಣುಕುತ್ತಿವೆ.